# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ - 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:14ನೇ ಜುಲೈ, 2020**

**ಸಂಖ್ಯೆ: 68**

ಈಗಾಗಲೇ ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೊರೋನ ವೈರಸ್ (ಕೋವಿಡ್-19)ನ ಹಿನ್ನಲೆಯಲ್ಲಿ ಮಾನ್ಯ ಸದಸ್ಯರ ಆರೋಗ್ಯದ ಹಿತದೃಷ್ಠಿಯಿಂದ ಕರ್ನಾಟಕ ವಿಧಾನಮಂಡಲದ/ವಿಧಾನ ಪರಿಷ್ತತಿನ ಎಲ್ಲಾ ಸಮಿತಿಗಳ ಸಭೆಯನ್ನು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಅಗತ್ಯವಿರುವ ಅಧಿಕಾರಿಗಳೊಂದಿಗೆ ನಡೆಸಲು ಎಲ್ಲಾ ಸಮಿತಿಗಳ ಅಧ್ಯಕ್ಷರುಗಳಿಗೆ ತಿಳಿಸಲಾಗಿರುತ್ತದೆ. ಆದರೆ, ಕೊರೋನ ವೈರಸ್ (ಕೋವಿಡ್-19) ರಾಜ್ಯದೆಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವುದರಿಂದ ಹಾಗೂ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಲಾಕ್ ಡೌನ್ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದರಿಂದ, ಅನಿವಾರ್ಯವಾಗಿ ಸಮಿತಿ ಸಭೆಗಳನ್ನು ನಡೆಸದೇ ಇರುವ ಬಗ್ಗೆ ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು ತಮ್ಮ ಸಮಿತಿಗಳಿಗೆ ನಿರ್ದೇಶಿಸಿರುವ ಹಿನ್ನಲೆಯಲ್ಲಿ ವಿಧಾನ ಪರಿಷತ್ತಿನ ಕೆಲವು ಸಮಿತಿಗಳು ಜಂಟಿ ಸಮಿತಿಗಳಾಗಿದ್ದು ಇನ್ನು ಕೆಲವು ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಾಗಿರುವುದರಿಂದ ಏಕರೂಪತೆಯನ್ನು ಕಾಯ್ದುಕೊಳ್ಳಲು ಹಾಗೂ ಪರಿಸ್ಥಿತಿಯ ಗಂಭೀರತೆಯ ಹಿನ್ನಲೆಯಲ್ಲಿ ಮುಂದಿನ ಆದೇಶದವರೆಗೂ ಸಮಿತಿ ಸಭೆಗಳನ್ನು ಸ್ಥಗಿತಗೊಳಿಸಲು ಮಾನ್ಯ ಸಭಾಪತಿಯವರು ಆದೇಶಿಸಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**